# ಕತೆಯೆಂಬ ಅನುರಾಗ
# ಕತೆಯೆಂಬ ಪಾಷಾಣ

ಅಬ್ದುಲ್ ರಶೀದ್

ಕನ್ನಡದ ಕಥಾಜಗತ್ತನ್ನು ವಿಸ್ತರಿಸಿದ ಕಥೆಗಾರರ ಕಥೆ ಬರೆಯುವ ಕಸುಬಿನ ಕುರಿತಾದ ಮಾಲಿಕೆ – 'ನನ್ನ ಕಥಾಪ್ರಸಂಗ'. ಕಥಾಯಾನದ ಖುಷಿ, ಸಂಕಟ, ಆ ಪ್ರಕಾರದ ಕುರಿತಾದ ವ್ಯಾಮೋಹ, ಸವಾಲು, ಮಾಂತ್ರಿಕತೆ, ಆದರಿಂದ ಆಗುವ ಬಿಡುಗಡೆ – ಇವೆಲ್ಲ ಅನುಭವಗಳನ್ನು ಒಳಗೊಳ್ಳಲಿರುವ ಈ ಮಾಲಿಕೆಗೆ ಬಹುಕಾಲದಿಂದ ಕಥೆಗಳನ್ನು ಬರೆದುಕೊಂಡು ಬಂದ ಕಥೆಗಾರರು ಬರೆಯುತ್ತ ಬಂದಿದ್ದಾರೆ. ಕಥೆಯ ನಿರೂಪಣಾ ವಿಧಾನದ ಕುರಿತ ಕಥೆಗಾರರ ಸ್ವಅನುಭವ 'ಮಯೂರ'ದ ಈ ಪುಟಗಳಲ್ಲಿದೆ

ಕತೆಗಳನ್ನು ಹೇಳುವುದೆಂದರೆ ನನಗೆ ಬಾಲ್ಯದಿಂದಲೂ ಒಂದು ರೀತಿ ಅನುರಾಗದ ಹಾಗೆ ಬಹಳ ಮೋಹದ ಕೆಲಸ. ಬಹಳ ಇತ್ತೀಚಿನವರೆಗೂ – ಬೇರೆ ಏನಕ್ಕೋ ಅವರವರ ಕೆಲಸಕ್ಕಾಗಿ ನನ್ನ ಎದುರಿಗೆ ಬಂದು ಕುಳಿತವರೂ ನನ್ನ ಕತೆಗಳನ್ನು ಕೇಳಲೆಂದೇ ಬಂದವರೆಂದು ತಿಳಿದುಕೊಂಡು ಬಿಡುತ್ತಿದ್ದೆ. ಒಂದು ರಾಗಾಲಾಪನೆಯ ಹಾಗೆ ಅವರಿಗೆ ಕತೆಗಳನ್ನು ಬಣ್ಣಿಸುತ್ತಾ ಹೇಳುವುದು ದೈವ ನನಗೆ ವಿಧಿಸಿರುವ ಆಣತಿಯೆಂದೇ ಅಂದುಕೊಂಡು ಗಂಟೆಗಟ್ಟಲೆ ಅವರಿಗೆ ಕತೆ ಹೇಳುತ್ತಾ ಕುಂತಿರುತ್ತಿದ್ದೆ ಅಥವಾ ಮಲಗಿರುತ್ತಿದ್ದೆ. ಕತೆಗಳನ್ನು ಹೇಳುವಾಗ ಉಯ್ಯಾಲೆಯಂತೆ ಚಲಿಸುವ ನನ್ನ ಮಿದುಳೊಳಗಿನ ಚಕ್ರದಂತಹ ಆ ನೆನಪ ಚಿತ್ರಗಳು, ಆ ಹೊತ್ತಿನ ಆ ಒನಪುಗಳು, ಆ ವಯ್ಯಾರಗಳು ನನಗೆ ಅನುಪಮವಾದ ಸುಖ ಸಂತೋಷಗಳನ್ನು ನೀಡುತ್ತಿದ್ದವು. ನನ್ನ ಸಣ್ಣ ಪುಟ್ಟ ಸೋಲುಗಳನ್ನು ಕತೆಗಳೊಳಗಿನ ಅನಿರೀಕ್ಷಿತ ತಿರುವುಗಳ ಮೂಲಕ ಮರೆಮಾಚಿ ಹೇಳುವುದು, ಪುಟ್ಟ ಪುಟ್ಟ ಗೆಲುವುಗಳನ್ನು ಹೇಳಲು ಸಂಕೋಚವಾಗಿ ಇದ್ದಕ್ಕಿದ್ದಂತೆ ನಿಲ್ಲಿಸಿ ಇನ್ನೊಂದು ಕತೆಯತ್ತ ದಾಂಗುಡಿಯಿಡುವುದು ಇದೆಲ್ಲ ನನಗೆ ಕತೆ ಬರೆಯುವುದಕ್ಕಿಂತ ಇಷ್ಟದ ವಿಷಯಗಳು. ಕತೆ ಹೇಳುವಾಗ ಕೇಳುವವರು